MSIL ಸ್ಥಾಪನೆ

1346; ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದಲ್ಲಿನ ವಿವಿಧ ಗ್ರಾಮಗಳಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಗ್ರಾಮಪಂಚಾಯಿತಿಗಳನ್ನಾಗಿ ಮಾಡುವ ಯೋಜನೆಯನ್ನು ಸರ್ಕಾರವು ಹೊಂದಿದೆಯೆ; ಹೊಂದಿದ್ದಲ್ಲಿ, ಯಾವಾಗ ಮಾಡಲಾಗುವುದು;

ಆ) ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗಡಿ ಗ್ರಾಮಗಳಲ್ಲಿ ನೂತನವಾಗಿ ಡೋಣೆವಾಡಿ, ಗಾಯಕವಾಡಿ, ಮತ್ತಿವಾಡೆ, ನಾಂಗನೂರ ಹಾಗೂ ಹದನಾಳ ಗ್ರಾಮಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಪಂಚಾಯಿತಿಗಳನ್ನಾಗಿ ಮಾಡಲು ಹೊಸದಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದ್ದಲ್ಲಿ ಯಾವಾಗ ಯಾರು ಸಲ್ಲಿಸಿದ್ದಾರೆ (ಅಲ್ಲಿನ ಜನ ಸಂಖ್ಯೆ, ಮನೆಗಳ ಸಂಖ್ಯೆ, ಕುಟುಂಬಗಳ ಸಂಖ್ಯೆ, ಪ.ಜಾತಿ/ಪ.ಪಂ ವರ್ಗದ ಜನಸಂಖ್ಯೆಗಳ ಮಾಹಿತಿಯನ್ನು ಒದಗಿಸುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.)

ಅ) ಕರ್ನಾಟಕ ಪಂ.ರಾಜ್ ಅಧಿನಿಯಮ 1993ರಂತೆ ಗ್ರಾಮ ಪಂಚಾಯತ್ ಪುನರ್ ವಿಂಗಡಣೆ/ಪರಿಷ್ಕರಣೆ ಕೇಂದ್ರ ಸ್ಥಳ ಬದಲಾವಣೆ ಮಾಡುವ ಬಗ್ಗೆ ಜನಪ್ರತಿನಿಧಿಗಳಿಂದ ಹಾಗೂ ಇತರೆ ಗ್ರಾಮಸ್ಥರಿಂದ ಮನವಿಗಳನ್ನು ಸಲ್ಲಿಸಲಾಗುತ್ತಿದ್ದು, ಈ ಮನವಿಗಳ ಬಗ್ಗೆ ಪರಿಶೀಲಿಸಲು 'ಸಮಿತಿ'ಯನ್ನು ರಚಿಸು ವಿಷಯವನ್ನು ಸರ್ಕಾರ ಪರಿಶೀಲಿಸುತ್ತಿದೆ.

ಆ) ಈ ಸಂಬಂಧ ಸರ್ಕಾರದಲ್ಲಿ ಸ್ವೀಕೃತವಾಗಿಲ್ಲ/ ಪ್ರತ್ಯೇಕ ಗ್ರಾಮ ಪಂಚಾಯತಿಗಳನ್ನಾಗಿ ಮಾಡಲು ಹೊಸದಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದಿಲ್ಲ.

ಕ್ರ ಸಂ	ಗ್ರಾಮ ಪಂಚಾಯತಿ ಹೆಸರು	ಗ್ರಾಮದ ಹೆಸರು	ಜನಸಂಖ್ಯೆ	ಮನೆಗಳ ಸಂಖ್ಯೆ	ಕುಟುಂಬಗಳ ಸಂಖ್ಯೆ	ಪ.ಜಾತಿ ವರ್ಗದ ಜನಸಂಖ್ಯೆ	ಪ.ಪಂ. ವರ್ಗದ ಜನಸಂಖ್ಯೆ
1	2	3	4	5	6	7	8
	ಕಾರಡಗಾ	ದೋಣವಾಡ	3474	650	708	320	-
	ಕೋಡ್ನಿ	ನಾಯಕನವಾಡ	1665	403	261	104	57
	ಯಮಗರ್ಣಿ	ಸಾಂಗಸೂರ	2496	756	516	398	39
	ಆವ್ಹಾಚವಾಡ	ಮತ್ತಿವಾಡ	1884	427	402	281	-
		ಪದಸಾಳ	1732	368	331	208	-

ಅಧ್ಯಕ್ಷರು:- ಶಿವಲಿಂಗೇಗೌಡರು ಕೇಳಿ.

(ಮಾನ್ಯ ಕೆ.ಎಂ. ಶಿವಲಿಂಗೇಗೌಡರು ಗೈರು ಹಾಜರು)

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಂತೆ ಗ್ರಾಮ ಪಂಚಾಯತ್ ಪುನರ್ ವಿಂಗಡಣೆ/ಪರಿಷ್ಕರಣೆ ಕೇಂದ್ರ ಸ್ಥಳ ಬದಲಾವಣೆ ಮಾಡುವ ಬಗ್ಗೆ ಜನಪ್ರತಿನಿಧಿಗಳಿಂದ ಹಾಗೂ ಇತರೆ ಗ್ರಾಮಸ್ಥರಿಂದ ಮನವಿಗಳನ್ನು ಸಲ್ಲಿಸಲಾಗುತ್ತಿದ್ದು, ಈ ಮನವಿಗಳ ಬಗ್ಗೆ ಪರಿಶೀಲಿಸಲು ಸಮಿತಿಯನ್ನು ರಚಿಸುವ ವಿಷಯವನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಆ ಸಮಿತಿಯನ್ನು ಬೇಗ ರಚನೆ ಮಾಡಬೇಕು ಮತ್ತು ಆದಷ್ಟು ಬೇಗ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್:- ಗ್ರಾಮಪಂಚಾಯತ್ ಪುನರ್ ವಿಂಗಡಣೆ/ಪರಿಷ್ಕರಣೆ ಹಾಗೂ ಕೇಂದ್ರ ಸ್ಥಳ ಬದಲಾವಣೆ ಮಾಡುವಂತಹ ವಿಚಾರವನ್ನು ಪರಿಶೀಲನೆ ಮಾಡಿ ಅವುಗಳಿಗೆ ಒಂದು ರೂಪ ಕೊಡಬೇಕೆನ್ನುವುದು ಸರ್ಕಾರದ ಚಿಂತನೆಯಾಗಿದೆ. ಅದಕ್ಕೆ ಸಮಿತಿಯೊಂದನ್ನು ನೇಮಿಸಬೇಕಾಗಿದೆ. ಈ ವಾರ ನಾವು ಸಮಿತಿಯನ್ನು ನೇಮಕ ಮಾಡುತ್ತೇವೆ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ):- ನಾನು ಇನ್ನೊಂದು ಪ್ರಶ್ನೆಯನ್ನು ಕೇಳಬೇಕಾಗಿದೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ಬೆಳಗಾವಿ ಜಿಲ್ಲೆಯ ಕೆಲವೊಂದು ಗ್ರಾಮ ಪಂಚಾಯಿತಿಗಳಲ್ಲಿ 70ಕ್ಕಿಂತ ಹೆಚ್ಚು ಸದಸ್ಯರಿದ್ದಾರೆ. ಹಾಗಾಗಿ ಅದನ್ನು ಪುನರ್‌ವಿಂಗಡಣೆ ಮಾಡುವುದು ಅಥವಾ ಗ್ರಾಮ ಪಂಚಾಯಿತಿಯನ್ನು ಒಡೆಯುವುದು ಬಹಳ ಅವಶ್ಯಕತೆ ಇದೆ. ಅದಕ್ಕಾಗಿ ಅದನ್ನು speed up ಮಾಡಬೇಕು.

ಅಧ್ಯಕ್ಷರು:– ಮಾನ್ಯ ಮಂತ್ರಿಯವರು ಒಂದು ವಾರದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ, ಆಯಿತು ಸಾಕು.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಮಂತ್ರಿಯವರು ಅದಕ್ಕೆ ಒಂದು ಸಮಿತಿ ಮಾಡುತ್ತೇವೆಂದು ಹೇಳಿದ್ದಾರೆ, OK. ಅದನ್ನು study ಮಾಡಿಕೊಂಡು, ಎಲ್ಲೆಲ್ಲಿ ಯಾವುದನ್ನು ಹೊಡೆಯಬೇಕೆನ್ನುವಂಥದ್ದು, division ಮಾಡುವಂಥದ್ದು, ಆದಷ್ಟು ಬೇಗನೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:– ಆಯಿತು, ಈ ವಾರದಲ್ಲೇ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಬಹಳಷ್ಟು ಪಂಚಾಯತ್‌ಗಳಲ್ಲಿ ಈ ರೀತಿಯಾಗಿರುವಂಥ ಸಮಸ್ಯೆ ಇದೆ. ಈ ಪಂಚಾಯತ್ ಪುನರ್ ವಿಂಗಡಣೆಯ ವಿಚಾರವಾಗಿ ಸಮಿತಿಯನ್ನು ಏನು ಮಾಡಬೇಕಾಗಿತ್ತು. ನಾವು ಆ ಸಮಿತಿಯನ್ನು ಇದೇ ವಾರದಲ್ಲೇ ಪುನರ್ ರಚನೆ ಮಾಡುತ್ತೇವೆ, ಆ ಸಮಿತಿ ಅಸ್ಥಿತ್ವಕ್ಕೆ ಬರುತ್ತದೆ.

ಅಧ್ಯಕ್ಷರು:– OK, ಸಾಕು.

ಶ್ರೀ ಜಗದೀಶ್ ಶೆಟ್ಟರ್:– ಅದಕ್ಕೆ time bound fix ಮಾಡಿ, ಆ ಸಮಿತಿಯಿಂದ ವರದಿಯನ್ನು ತೆಗೆದುಕೊಳ್ಳಿ.

ಶ್ರೀ ಹೆಚ್.ಕೆ. ಪಾಟೀಲ್:– ನಾವು ಎಷ್ಟು time bound ಮಾಡಿದರೂ, ಪಾರ್ಲಿಮೆಂಟ್ ಚುನಾವಣೆಯಾಗುವುದಕ್ಕಿಂತ ಮೊದಲು ಏನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ಹೌದು, time ಆಯಿತು.

ಶ್ರೀ ಜಗದೀಶ್ ಶೆಟ್ಟರ್:– ಪಾರ್ಲಿಮೆಂಟ್ ಚುನಾವಣೆ ಆದಮೇಲೆ ವರದಿ ಕೊಡಲಿ.

ಅಧ್ಯಕ್ಷರು:– ಮಾನ್ಯ ಜಗದೀಶ್ ಶೆಟ್ಟರೆ, ಆಯಿತು.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ವಿರೋಧಪಕ್ಷದ ನಾಯಕರು ಎಷ್ಟು ಬೇಗ ಆಗಬೇಕೆಂದು ಅಪೇಕ್ಷೆ ಪಡುತ್ತಿರೋ, ಅಷ್ಟು ಬೇಗ ಮಾಡುತ್ತೇವೆ.

ಅಧ್ಯಕ್ಷರು:– OK.

ಶ್ರೀ ಜಗದೀಶ್ ಶೆಟ್ಟರ್:– ಅದರ interpretation ಅನ್ನು ಸ್ವಲ್ಪ ಹೇಳಿನಿಡಿ, ಅದು ಒಂದು ತಿಂಗಳೊ, ಎರಡು ತಿಂಗಳೊ ಎಂಬುದನ್ನು ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ವಿರೋಧಪಕ್ಷದ ನಾಯಕರು ಎರಡು ತಿಂಗಳು ಎಂದು ಹೇಳಿದ್ದಾರೆ, ಎರಡು ತಿಂಗಳೊಳಗೆ ಪ್ರಕ್ರಿಯೆ ಪ್ರಾರಂಭ ಮಾಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್‌ರವರು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:– ವಿಷಯ ಇಲ್ಲದೇ ಅವಕಾಶ ಕೊಡುವುದಕ್ಕೆ ಆಗುತ್ತದೆಯೇ? ಟೈಮ್ ನೋಡಿ, ಹತ್ತು ನಿಮಿಷಗಳು ಜಾಸ್ತಿಯಾಗಿದೆ, ಏನು ಹೇಳಿ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:– ಮಾನ್ಯ ಅಧ್ಯಕ್ಷರೆ, ನಾನು ಜನಸಂಖ್ಯೆ ವಿವರವನ್ನು ಕೇಳಿದ್ದೆ. ಅದಕ್ಕೆ ಅಧಿಕಾರಿಗಳು ಕೊಟ್ಟಿರುವ ಉತ್ತರ

ಏನೆಂದರೆ, ಮೊದಲನೇ ಸಾಲಿನಲ್ಲಿ ಗ್ರಾಮ ಪಂಚಾಯತಿಯ ಹೆಸರು ಕಾರದಗಾ ಎಂದು ಕೊಟ್ಟಿದ್ದು, ಗ್ರಾಮದ ಹೆಸರು ಡೋಣೆವಾಡಿ ಎಂದು ಕೊಟ್ಟಿದ್ದಾರೆ. ಜನಸಂಖ್ಯೆ 3,474 ಎಂದು ಕೊಟ್ಟಿದ್ದಾರೆ. ಕಾರದಗಾ ಗ್ರಾಮಪಂಚಾಯತಿಯಲ್ಲಿ ಎರಡು ಗ್ರಾಮಗಳು ಬರುತ್ತವೆ. ಅವುಗಳು ಕಾರದಗಾ ಮತ್ತು ಡೋಣೆವಾಡಿ ಎಂದು ಬರುತ್ತವೆ, ಇಲ್ಲಿ 32 ಜನ ಸದಸ್ಯರು ಬರುತ್ತಾರೆ. 22 ಕಾರದಗಾ...

ಅಧ್ಯಕ್ಷರು:– ತಾವು ಪ್ರಶ್ನೆ ಏನೆಂಬುದನ್ನು ಹೇಳಿ.

ಶ್ರೀ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:– ಮಾನ್ಯ ಅಧ್ಯಕ್ಷರೆ, ಸಕಾರ ಕೊಟ್ಟಿರುವ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:– ಆಯಿತು. ಉತ್ತರ ತಪ್ಪಿದೆಯೆಂದು ಹೇಳಿದ್ದಾರೆ, ಪರಿಶೀಲನೆ ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಸದಸ್ಯರು ಜನಸಂಖ್ಯೆಯ ಅಂಕಿ–ಸಂಖ್ಯೆಗಳು ಸರಿ ಇಲ್ಲವೆಂದು ಹೇಳಿದ್ದಾರೆ. ಅದನ್ನು check ಮಾಡಿ, ಸರಿಯಾದ ವಿವರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು:– OK. ಈಗ ಪ್ರಶ್ನೋತ್ತರ ಮುಗಿಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಾನ್ಯ ಜಯಚಂದ್ರರವರೆ ಹೇಳಿ.

1. ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು):– ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 8ನೇ ಪಟ್ಟಿಯಲ್ಲಿರುವ 227 ಪ್ರಶ್ನೆಗಳ ಪೈಕಿ 175 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.